(52)

# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

**ಸಂ.ಕಂ/ಹಬ/ವಿವಾದ/55/2014-15** **ದಿ:18/04/2016**

ವಾದಿಗಳು ವಿರುದ್ಧ ಪ್ರತಿವಾದಿಗಳು

1.ಸಯ್ಯದ್ ಶುಕ್ಕೂರ್ ತಂದೆ ಅಬ್ದುಲ್‌ಸಾಬ್ ---------- ಕೆ.ಎಸ್.ಗೌಸ್‌ಪೀರ್‌ಸಾಬ್ ತಂದೆ ಅಬ್ದುಲ್‌ಜಾನಿ (ತಾತ)
2.ಸಯ್ಯದ್ ರಿಜ್ವಾನ್‌ಭಾಷಾ ತಂದೆ ಅಬ್ದುಲ್‌ಸಾಬ್ ಅಗಸನೂರು ಗ್ರಾಮ.
ಅಗಸನೂರು ಗ್ರಾಮ.

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಅಗಸನೂರು | 15 | 14-24 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಅಗಸನೂರು ಗ್ರಾಮದ ಸ,ನಂ. 15 ವಿ:14-24 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ತಾಜುನ್ನೀಸಾ ಗಂಡ ಅಬ್ದುಲ್‌ಸಲಾಂ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿ:07-04-2014 ರಂದು ಮರಣ ಹೊಂದಿರುವುದರಿಂದ, ಪೋತಿವಾರಸು ಮೇರೆಗೆ 1.ಸಯ್ಯದ್ ಶುಕ್ಕೂರ್ ತಂದೆ ಅಬ್ದುಲ್‌ಸಾಬ್ 2.ಸಯ್ಯದ್ ರಿಜ್ವಾನ್‌ಭಾಷಾ ತಂದೆ ಅಬ್ದುಲ್‌ಸಾಬ್ ಇವರು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದು, ಅದರಂತೆ ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಅಗಸನೂರು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಶ್ರೀ ಕೆ.ಎಸ್.ಗೌಸ್‌ಪೀರ್‌ಸಾಬ್ ತಂದೆ ಅಬ್ದುಲ್‌ಜಾನಿ (ತಾತ) ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿನಾಂಕ:01-10-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:19/2014-15 ದಿ:21-10-2014 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:03-01-2015 ರಿಂದ 21-03-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಅರ್ಜಿದಾರರ ಹೇಳಿಕೆ ಪ್ರಕಾರ ಸದ್ರಿ ಜಮೀನು ತಮ್ಮ ತಾಯಿಯ ಹೆಸರಿಗೆ ಇದ್ದು, ತಮ್ಮ ತಾಯಿ ದಿ:07-04-2014 ರಂದು ಮರಣ ಹೊಂದಿರುವದರಿಂದ ಹಾಗೂ ಮೃತ ಪಟ್ಟಾದಾರರ ಇತರೆ ವಾರಸುದಾರರು ದಿ:01-07-2014 ರಂದು

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಅರ್ಜಿದಾರರ ಹೆಸರಿಗೆ ಪಟ್ಟಾ ಬದಲಾವಣೆ ಹೊಂದಲು ಒಪ್ಪಿಗೆ ಪತ್ರ ನೀಡಿದ್ದು, ಅದರಂತೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರತಿವಾದಿಯು ದಿ:14-09-2015 ರ ವಿಚಾರಣೆ ಸಮಯದಲ್ಲಿ ಸದ್ರಿ ಹಕ್ಕು ಬದಲಾವಣೆಗೆ ಸಂಭಂದಿಸಿದಂತೆ ಊರಿನ ಹಿರಿಯರ ಸಮಕ್ಷಮದಲ್ಲಿ ಉಭಯತರೂ ರಾಜೀಯಾಗಿರುವುದಾಗಿ ತಾನು ಸಲ್ಲಿಸಿದ ತಕರಾರನ್ನು ವಾಪಾಸು ಪಡೆಯುತ್ತೇನೆಂದು ಹೇಳಿಕೆ ನೀಡಿ, ದಿನಾಂಕ:20-01-2016 ರಂದು ನೋಟರಿ ಸಮಕ್ಷಮ ನೀಡಿದ ಅಫಿಡೆವಿಟನ್ನು ಸಲ್ಲಿಸಿ ತಾನು ನೀಡಿದ ತಕರಾರನ್ನು ವಾಪಾಸು ಪಡೆದಿರುವುದಾಗಿ, ದಾಖಲೆ ಹಾಜರುಪಡಿಸಿರುತ್ತಾರೆ.

ಆದ್ದರಿಂದ ಸಿರುಗುಪ್ಪ ತಾಲೂಕು ಅಗಸನೂರು ಗ್ರಾಮ ಸ,ನಂ.15 ವಿ:14-24 ಎಕ್ರೆ ಜಮೀನಿಗೆ ಹಾಲಿ ಪಟ್ಟಾದಾರರು ಮರಣ ಹೊಂದಿರುವುದರಿಂದ, ಪೋತಿವಾರಸು ಮೇರೆಗೆ 1.ಸಯ್ಯದ್ ಶುಕ್ಕೂರ್ ತಂದೆ ಅಬ್ದುಲ್‌ಸಾಬ್ 2.ಸಯ್ಯದ್ ರಿಜ್ವಾನ್‌ಭಾಷಾ ತಂದೆ ಅಬ್ದುಲ್‌ಸಾಬ್ ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/55/2014-15** **ದಿ:18/04/2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಅಗಸನೂರು ಗ್ರಾಮದ ಸ,ನಂ. 15 ವಿ:14-24 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ತಾಜುನ್ನೀಸಾ ಗಂಡ ಅಬ್ದುಲ್‌ಸಲಾಂ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿ:07-04-2014 ರಂದು ಮರಣ ಹೊಂದಿರುವುದರಿಂದ, ಪೋತಿವಾರಸು ಮೇರೆಗೆ **1.ಸಯ್ಯದ್ ಶುಕ್ಕೂರ್ ತಂದೆ ಅಬ್ದುಲ್‌ಸಾಬ್ 2.ಸಯ್ಯದ್ ರಿಜ್ವಾನ್‌ಭಾಷಾ ತಂದೆ ಅಬ್ದುಲ್‌ಸಾಬ್** ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:18-04-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಗೆ,
1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ